ದಿನಾಂಕಃ **8.4.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಸಿ.ಸಿ.ಎಲ್ ಅರ್ಜಿದಾರರ ಪರ ವಕೀಲರಿಂದ**

ನಾನು ಕಳೆದ **9** ತಿಂಗಳಿನಿಂದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ನಮ್ಮ ಕಂಪನಿಯ ಇನ್ವೆಸ್ಟಿಗೇಟರ್ ಮೂಲಕ ತನಿಖೆ ಮಾಡಿಸಿರುತ್ತೇವೆ ಎಂದರೆ ದಾಖಲಾತಿಗಳನ್ನು ತೆಗೆದುಕೊಂಡಿರುತೆತೇವೆ. ನಮ್ಮ ಇನ್ವೆಸ್ಟಿಗೇಟರ್ ಮೂಲಕ ಎರಡೂ ವಾಹನದ ದಾಖಲಾತಿಗಳು ಮತ್ತು ಪೋಲೀಸ್ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಎರಡೂ ವಾಹನಗಳು ಒಂದೇ ಕಂಪನಿಯಲ್ಲಿ ವಿಮೆ ಮಾಡಿಸಲಾಗಿದೆ ಎಂದರೆ ಸರಿ. ಆಪಾದಿತ ವಾಹನ ಕೆಎ.**52**.ಎಸ್.**1637** ದಿನಾಂಕ **6.9.2019** ರಿಂದ **5.9.2024** ರ ವರೆಗೆ **5** ವರ್ಷಗಳ ವಿಮೆ ಮಾಡಿಸಲಾಗಿದೆ ಎಂದರೆ ಸರಿ. ಸದರಿ ವಿಮೆ Comprehensive policy ಎಂದರೆ ಸರಿ. ಅರ್ಜಿದಾರರ ವಾಹನ ಸಹ ದಿನಾಂಕ 12.10.2023 ರಿಂದ 12.10.2024 ರ ವರೆಗೆ ವಿಮೆ ಆಗಿದೆ ಎಂದರೆ ಸರಿ. ಅರ್ಜಿದಾರರ ವಿಮೆ ಸಹ Comprehensive policy ಎಂದರೆ ಸರಿ. ಈ ಅಪಘಾತದಲ್ಲಿ ರೇಖಾ ಮತ್ತು ರತ್ನಮ್ಮ ಗಾಯಾಳುಗಳಾಗಿರುತ್ತಾರೆ ಎಂದರೆ ಸರಿ . ಗಾಯಾಳುವಾದ ರತ್ನಮ್ಮ ರವರು ಎಂ.ವಿ.ಸಿ. **1582/2024** ರಲ್ಲಿ ಬೆಂಗಳೂರು ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಾವು ಯಾವುದೇ ಪ್ರಕರಣದಲ್ಲಿ ರಾಜೀ ಮಾಡಿಕೊಳ್ಳ ಬೇಕಾದರೆ ನಮ್ಮ ಭಾದ್ಯತೆ ಇದ್ದರೆ ಮಾತ್ರ ರಾಜೀ ಮಾಡಿಕೊಳ್ಳುತ್ತೇವೆ ಎಂದರೆ ಸರಿ. ಎಂ.ವಿ.ಸಿ. **1582/2024** ರಲ್ಲಿ **2** ಲಕ್ಷ

ರೂಗಳಿಗೆ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆದರೆ Contributory negligence ಗಣನೆಗೆ ತೆಗೆದುಕೊಂಡಿರುತ್ತೇವೆ. ಎಂ.ವಿ.ಸಿ. 1582/2024 ರಲ್ಲಿ Contributory negligence ಗಣನೆಗೆ ತೆಗೆದುಕೊಂಡಿರುವ ಬಗ್ಗೆ ಮೊಮೋದಲ್ಲಿ ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಎಂ.ವಿ.ಸಿ. 1582/2024 ರಲ್ಲಿ Contributory negligence ಇದೆ ಎಂದು ನಾವು ಗಣನೆಗೆ ತೆಗೆದುಕೂಂಡಿಲ್ಲ ಎಂದರೆ ಸರಿಯಲ್ಲ. ಎಂ.ವಿ.ಸಿ. 1582/2024 ರಲ್ಲಿ ನಾವು ನಮ್ಮ ತಕರಾರನ್ನು ಸಲ್ಲಿಸಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ Contributory negligence ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ವಿ.ಸಿ. 1582/2024 ರಲ್ಲಿ ನಮ್ಮ ಭಾದ್ಯತೆ ಇರುವುದರಿಂದ Contributory negligence ಗಣನೆಗೆ ತೆಗೆದುಕೊಳ್ಳದೇ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ವಿಮಾದಾರರ ಮೇಲೆ ಸಲ್ಲಿಸಲಾದ ದೋಷಾರೋಪಣ ಪತ್ರವನ್ನು ನಾವು ಪ್ರಶ್ನೆ ಮಾಡಿಲ್ಲ. ಮೃತ ರೇಖಾ ರವರಿಗೆ ತಲೆಗೆ ತೀವ್ರ ತರವಾಗಿ ಪೆಟ್ಟಾಗಿ ಚಿಕಿತ್ಸೆ ಫಲಕಾರಿ ಆಗದೇ ಮೃತಹೊಂದಿರುತ್ತಾರೆ ಎಂದರೆ ಸರಿ. ಮೃತ ರೇಖಾ ರವರಿಗೆ ತಲೆಗೆ ಗಾಯವಲ್ಲದೇ ಬೇರೆ ಗಾಯಗಳಿಂದ ಮೃತಹೊಂದಿರುವುದಾಗಿ ತೋರಿಸಲು ನಾವು ಯಾವುದೇ ದಾಖಲೆ ಸಲ್ಲಿಸಿಲ್ಲ. ನಾವು ವಿಮೆ ನೀಡಿದ ವಾಹನದ ಚಾಲಕನಿಗೆ ಚಾಲನಾ ಪರವಾನಗಿ ಇತ್ತು ಎಂದರೆ ಸರಿ. ಮೃತರು ಹೋಗುತ್ತಿದ್ದ ವಾಹನದ ಚಾಲಕನಿಗೆ ಚಾಲನಾ ಪರವಾನಗಿ ಇತ್ತು ಎಂದರೆ ಸರಿಯಲ್ಲ. ಎರಡೂ ವಾಹನದ ವಿಮೆದಾರರು ಯಾವುದೇ ನಿಯಮವನ್ನು ಉಲ್ಲಂಘನೆ

ಮಾಡಿಲ್ಲ ಎಂದರೆ ಸರಿಯಲ್ಲ. ಈ ಅಪಘಾತ ಮೃತರು ಹೋಗುತ್ತಿದ್ದ ವಾಹನ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ. ನಮ್ಮ ಭಾದ್ಯತೆಯಿಂ ತಪ್ಪಿಸಿಕೊಳ್ಳಲು ಅರ್ಜಿದಾರರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ. ಹೇಳಿ. ಕೇಳಿ.ಸರಿ. ಇದೆ

**6** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು